## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 140/2014 ಪಿ.ಡಬ್ಲ್ಯೂಃ 1

ಸಿಡಬ್ಲೂಃ 14

ಸಾಕ್ಷಿದಾರರ ಹೆಸರು : ಅರವಿಂದ ಕಲಗುಜ್ಜಿ

ತಂದೆಯ ಹೆಸರು : ನಾರಾಯಣ ಕಲಗುಜ್ಜಿ

ವಯಸ್ಸು : 56 ವರ್ಷ

ಉದ್ಯೋಗ : ಡಿಎಸ್ಪಿ ಕಾರ್ಕಳ ಉಪ ವಿಭಾಗ , ಉಡುಪಿ

ವಾಸ್ತವ್ಯ : ಕಾರ್ಕಳ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 28-11-2023

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ದಿಃ 05-08-2007 ರಿಂದ 17-03-2009 ರ ವರೆಗೆ ಸಿಪಿಐ, ಕದ್ರಾ ಆಗಿ ಕೆಲಸ ನಿರ್ವಹಿಸಿದ್ದೇನೆ.

ದಿಃ 27-03-2008 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ -12 ರವರಿಂದ ಪಡೆದುಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಆರೋಪಿ ಪತ್ತೆಗೆ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ . ದಿಃ 01-12-2008 ರಂದು ಪ್ರಕಾಶ ವಿನಾಯಕ ಪಾಟೀಲ ಇತನು ಚಾಸಾ-13 ರವರಿಗೆ ಬೇರೆ ಪ್ರಕರಣದಲ್ಲಿ ಸಿಕ್ಕಿದ್ದು ಚಾಸಾ -13 ರವರು ಸದ್ರಿ ವಿಷಯವನ್ನು ನಮಗೆ ತಿಳಿಸಿರುತ್ತಾರೆ. ನಂತರ ನ್ಯಾಯಾಲಯದಿಂದ ವಾರಂಟನ್ನು ಪಡೆದುಕೊಂಡು ಸದರಿ ಪ್ರಕಾಶ ಅವರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಸದರಿಯವರನ್ನು ಪೋಲಿಸ ಅಭಿರಕ್ಷೆಗೆ ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಮುಂದುವರೆಸಿ ಪ್ರಕಾಶ ವಿನಾಯಕ ಪಾಟೀಲ ಇವರನ್ನು ವಿಚಾರಿಸಲಾಗಿ ತಾನು ಮತ್ತು 2 ನೇ ಆರೋಪಿ ಸೇರಿ ಮನೆಯ ಕಳ್ಳತನ ಮಾಡಿರುವುದಾಗಿ ಸ್ವಖುಷಿ ಹೇಳಿಕೆಯನ್ನು ನೀಡಿರುತ್ತಾನೆ. 1 ನೇ ಆರೋಪಿಯ ಸ್ವಖುಷಿ ಹೇಳಿಕೆ ಅನುಗುಣವಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು

ಮಾಡಿರುತ್ತೇನೆ. ದಿಃ 02-12-2008 ರಂದು 1 ನೇ ಆರೋಪಿಯ ಹೇಳಿಕೆಯ ಅನುಗುಣ ವಾಗಿ ಚಾಸಾ -4 ಮತ್ತು 5 ರವರಿಗೆ ಮುಂಡಗೋಡಿನ ಪುನಂ ಜ್ಯೂವೆಲರ್ಸ್ ಗೆ ಹೋಗಿದ್ದು ಅಲ್ಲಿ ಕದ್ದ ಮಾಲನ್ನು ವಶಪಡಿಸಿಕೊಂಡಿರುತ್ತೇನೆ. ತದನಂತರ ನಾವು ಠಾಣೆಗೆ ಬಂದು ಸದರಿ ಮುದ್ದೆಮಾಲಿಗೆ ಸಂಬಂಧಿಸಿದಂತೆ ಸ್ವತ್ತು ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ಅದೇ ದಿನದಂದು ಚಾಸಾ -1 ಮತ್ತು 7 ರಿಂದ 10 ರವರ ಮರು ಹೇಳಿಕೆ ಮತ್ತು 6 ಮತ್ತು11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇಃನೆ.ದಿಃ 03-12-2008 ರಂದು ತನಿಖೆಯನ್ನು ಮುಗಿಸಿದ್ದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ .ದಿಃ 31-12-2008 ರಂದು 2 ನೇ ಆರೋಪಿ ಅಂದರೆ ದೀಪಕ ಅಲಿಯಾಸ ಲಲಿತ ಕುಮಾರ ಇವರು ಪತ್ತೆಯಾಗದಿರುವ ವಿಷಯನ್ನು ನಮೂದಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿನ ನಿಪಿ-3 ನ್ನು ಗುರುತಿಸುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ , ನನ್ನ ಸಹಿಯನ್ನು ನಿಪಿ-3 ಸಿ ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದೆ ಇರುವ ನಿಪಿ-4 ನ್ನು ಗುರುತಿಸುತ್ತೇನೆ ಅದರಲ್ಲಿರುವ ಸಹಿ ನನ್ನದೇ ಅಗಿದ್ದು ಅದನ್ನು ನಿಪಿ-4 ಸಿ ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದಿರುವ ಪ್ರಕಾಶ ವಿನಾಯಕ ಪಾಟೀಲ ಇವರ ಸ್ವ ಖುಷಿ ಹೇಳಿಕೆಯನ್ನು ನೋಡುತ್ತಿದ್ದು ಅವುಗಳನ್ನು ನಿಪಿ-6 ಎಂದು ಗುರುತಿಸಲಾಯಿತು ಅದರಲ್ಲಿರುವ ಸಹಿ ನನ್ನದೇ ಅಗಿದ್ದು ಅದನ್ನು ನಿಪಿ-6 ಸಿ ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿರುವ ಆರೋಪಿ ಪ್ರಕಾಶ ವಿನಾಯಕ ಪಾಟೀಲ ಇವರ ಸಹಿಯನ್ನು ನೋಡಿ ಗುರುತಿಸುತ್ತೇನೆ ಅವನ ಸಹಿಯನ್ನು ನಿಪಿ-6 ಬಿ ಎಂದು ಗುರುತಿಸಲಾಯಿತು . ಮೂಲ ಪ್ರಕರಣದಲ್ಲಿ ಮುದ್ದೆಮಾಲು 2 ರಿಂದ 5 ಎಂದು ಗುರುತಿಸಲಾದ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ .

<u>ಪಾಟೀ ಸವಾಲುಃ ಶ್ರೀ ಪಿ ಬಿ ಟಿ ಆರೋಪಿ ಪರ ವಕೀಲರಿಂದಃ</u>

1 ನೇ ಆರೋಪಿ ಅಂದರೆ ಪ್ರಕಾಶ ವಿನಾಯಕ ಪಾಟೀಲ ಇವರ ಸ್ವಖುಷಿ ಹೇಳಿಕೆಯನಲ್ಲು ಚಾಸಾ -13 ರವರಿಂದ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .ನಾನು 1 ನೇ ಅರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .ನಾನು ಪಂಚರ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಮತ್ತು ಪಂಚನಾಮೆ ಮಾಡಿರುವುದಿಲ್ಲ

ಎಂದರೆ ಸರಿಯಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ .ಚಾಸಾ-4 ಮತ್ತು 5 ರವರೊಂದಿಗೆ ಮುಂಡಗೋಡಗೆ ಹೋಗಿರುವುದಿಲ್ಲ ಮತ್ತು ಅವರ ಸಮಕ್ಷಮ ಏನನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿ ಮತ್ತು ಮರು ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . 2 ನೇ ಆರೋಪಿ ಅಂದರೆ ದೀಪಕ ಅಲಿಯಸ್ ಲಲಿತ ಕುಮಾರ ಇವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ .ಚಾಸಾ-13 ರವರ ಸಮಕ್ಷಮ 1 ನೇ ಆರೋಪಿ ಪ್ರಕಾಶ ಇವನು ಸ್ವ ಇಚ್ಚಾ ಹೇಳಿಕೆಯನ್ನು ನೀಡಿದಂತೆ ನಾವೇ ಅವನ ಸ್ವಇಚ್ಚಾ ಹೇಳಿಕೆಯನ್ನು ಈ ಪ್ರಕರಣಕ್ಕೆ ಪೂರಕವಾಗುವಂತೆ ತಯಾರಿಸಿದ್ದೇವೆ ಎಂದರೆ ಸರಿಯಲ್ಲ . ಸದರಿ ದೀಪಕ ಮತ್ತು ಈ ಪ್ರಕರಣದಲ್ಲಿ ಆದ ಕಳ್ಳತನಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**